<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>

<u>ವಿರಾಜಪೇಟೆ</u>

*<u>ಸಿ.ಸಿ. ಸಂಖ್ಯೆ : 128/2016</u>*

*ಚಾಸಾ : 9*

*ಪಾಸಾ : 4*

| | | |
|---|---|---|
| **ಹೆಸರು** | : | ಶ್ರೀನಿವಾಸ್ ಹೆಚ್ ಹೆಚ್ |
| **ತಂದೆಯ ಹೆಸರು** | : | ಲೇಟ್ ಅಯ್ಯಣ್ಣಚಾರಿ |
| **ವಯಸ್ಸು** | : | 57 ವರ್ಷ |
| **ಉದ್ಯೋಗ** | : | ಜ್ಯೂವೆಲರಿ ಶಾಪ್ |
| **ವಾಸಸ್ಥಳ** | : | ಚೆನ್ನರಾಯ ಪಟ್ಟಣ ತಾ|| ಹಾಸನ ಜಿಲ್ಲೆ |

**<u>ದಿನಾಂಕ : *24-05-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ :-**

ಚಾಸಾ-7 ಹಾಗೂ 8 ರವರ ಪರಿಚಯವಿರುತ್ತದೆ. 1 ನೇ ಆರೋಪಿಯ ಪರಿಚಯವಿರುತ್ತದೆ. ಉಳಿದ ಆರೋಪಿಗಳ ಪರಿಚಯವಿರುವುದಿಲ್ಲ. ನಾನು ಚೆನ್ನರಾಯಪಟ್ಟಣದಲ್ಲಿ ಮೋಹನ್ ಜ್ಯೂವೆಲರಿ ಎಂಬ ಹೆಸರಿನಲ್ಲಿ ಚಿನ್ನದ ಅಂಗಡಿ ಇಟ್ಟುಕೊಂಡಿದ್ದೇನೆ. 1 ನೇ ಆರೋಪಿ ನಮ್ಮ ಅಂಗಡಿಯ ಖಾಯಂ ಗ್ರಾಹಕನಾಗಿದ್ದನು. 2015 ನೇ ಇಸವಿಯಲ್ಲಿ 1 ನೇ ಆರೋಪಿಯು ನಮ್ಮ ಅಂಗಡಿಗೆ ಬಂದು ಒಂದು ಪೆಂಡೆಂಟ್ ಇರುವಂತಹ ಚಿನ್ನದ ಸರ, ಒಂದು ಚಿನ್ನದ ಬಳೆ ಹಾಗೂ ಎರಡು ಚಿನ್ನದ ಉಂಗುರಗಳನ್ನು ತಂದು ಕೊಟ್ಟಿದ್ದು, ಅದನ್ನು ನಾನು ಖರೀದಿ ಮಾಡಿ, ನಂತರ ಅವುಗಳನ್ನು ಕರಗಿಸಿ ಗಟ್ಟಿ ಮಾಡಿರುತ್ತೇನೆ. ನಂತರ ಪೋಲಿಸರು ಬಂದು ನಮ್ಮ ಅಂಗಡಿಯಲ್ಲಿ ವಿಚಾರಣೆ ಮಾಡಿದ್ದು, 1 ನೇ ಆರೋಪಿಯು ಸದರಿ ಚಿನ್ನದ ಸ್ವತ್ತುಗಳನ್ನು ಕಳ್ಳತನ ಮಾಡಿ ನಮ್ಮ ಅಂಗಡಿಗೆ ಕೊಟ್ಟಿರುವುದು ತಿಳಿದು ಬಂದಿರುತ್ತದೆ.

ನಂತರ ನಾನು ಕರಗಿಸಿ ಗಟ್ಟಿ ಮಾಡಿದ ಚಿನ್ನದ ಗಟ್ಟಿಯನ್ನು ಪೋಲಿಸ್ ಠಾಣೆಗೆ ನೀಡಿರುತ್ತೇನೆ. ನಂತರ ಪೋಲಿಸರು ಸದರಿ ಚಿನ್ನದ ಗಟ್ಟಿಯನ್ನು ನನ್ನ, ಚಾಸಾ7 ಹಾಗೂ 8 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಸದರಿ ಚಿನ್ನ ಗಟ್ಟಿಯನ್ನು

ಅಮಾನತ್ತುಪಡಿಸಿಕೊಂಡಾಗ ಪೋಲಿಸರು ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ ದೃಢೀಕೃತ ಪ್ರತಿಯನ್ನು ನಿಪಿ*8* ಎಂದು, ಸಾಕ್ಷಿಯ ಸಹಿಯನ್ನು ನಿಪಿ*8(ಎ)* ಎಂದು ಗುರುತಿಸಲಾಯಿತು.

**ಪಾಟಿ ಸವಾಲು : ಶ್ರೀ. ಸಿ ಕೆ ಪಿ *2* ರಿಂದ *4*ನೇ ಆರೋಪಿಗಳ ಪರ ವಕೀಲರಿಂದ :**

ನಾನು ಚೆನ್ನರಾಯಪಟ್ಟಣದಲ್ಲಿ ಚಿನ್ನದ ಅಂಗಡಿಯನ್ನು ನಡೆಸುತ್ತಿದ್ದ ಬಗ್ಗೆ ಪೋಲಿಸರಿಗೆ ದಾಖಲೆಗಳನ್ನು ನೀಡಿರುತ್ತೇನೆ. ನಾನು 1ನೇ ಆರೋಪಿಯಿಂದ ಚಿನ್ನವನ್ನು ಖರೀದಿಸಿದಾಗ ಅವರಿಂದ ಯಾವುದೇ ದಾಖಲೆಗಳನ್ನು ಪರಿಶೀಲಿರುವುದಿಲ್ಲ. ಆ ರೀತಿ ಚಿನ್ನವನ್ನು ಖರೀದಿ ಮಾಡುವಾಗ ಸದರಿ ಚಿನ್ನದ ಮೂಲದ ಬಗ್ಗೆ ವಿಚಾರಿಸಿದ್ದೀರಾ ಹಾಗೂ ಆ ಬಗ್ಗೆ ಪೋಲಿಸರಿಗೆ ಮಾಹಿತಿ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಅವರ ಬಗ್ಗೆ ಯಾವುದೇ ಸಂಶಯವಿದ್ದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಅದು ಕಳ್ಳತನ ಮಾಡಿದ ಚಿನ್ನ ಅಲ್ಲ ಎಂದರೆ ಸಾಕ್ಷಿಯು ನನಗೆ 1ನೇ ಆರೋಪಿ ಕಳ್ಳತನ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿಯು ನನಗೆ ಚಿನ್ನವನ್ನು ಮಾರಿದ ದಿನದಂದು ನಮ್ಮ ಅಂಗಡಿಗೆ ಎಷ್ಟು ಜನ ಗ್ರಾಹಕರು ಬಂದಿದ್ದರು ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ. ಚಿನ್ನವನ್ನು ಮಾರಾಟ ಮಾಡಿದಾಗ ಹಾಗೂ ಖರೀದಿಸಿದಾಗ ಆ ಬಗ್ಗೆ ರಶೀತಿ ನೀಡಬೇಕು ಹಾಗೂ ಅದರ ಒಂದು ಪ್ರತಿಯನ್ನು ನಮ್ಮ ಅಂಗಡಿಯ ಪುಸ್ತಕದಲ್ಲಿ ಇಟ್ಟುಕೊಳ್ಳಬೇಕು ಎಂದರೆ ಸರಿ. ಆ ರೀತಿ 1ನೇ ಆರೋಪಿಯಿಂದ ಚಿನ್ನವನ್ನು ಖರೀದಿಸಿದ ಬಗ್ಗೆ ಪೋಲಿಸರಿಗೆ ನಾನು ಯಾವುದೇ ದಾಖಲೆ ನೀಡಿರುವುದಿಲ್ಲ. ನಾವು ಚಿನ್ನವನ್ನು ಕರಗಿಸಿದಾಗ ಬೇರೆ ಬೇರೆ ಗಟ್ಟಿ ಮಾಡಿ ಇಡುತ್ತೇವೆ. 1ನೇ ಆರೋಪಿ ನೀಡಿದಂತಹ ಚಿನ್ನವನ್ನು ಕರಗಿಸಿ, ಗಟ್ಟಿ ಮಾಡಿ, ಇಟ್ಟ ಬಗ್ಗೆ ನಿಖರವಾದ ಯಾವುದೇ ಕುರುಹು ಇಟ್ಟಿರುವುದಿಲ್ಲ. ನಮ್ಮ ಅಂಗಡಿಯಲ್ಲಿ ಸಿಸಿ ಟಿವಿ ವ್ಯವಸ್ಥೆ ಈಗ ಇರುತ್ತದೆ, ಆದರೆ 2015ನೇ ಇಸವಿಯಲ್ಲಿ ಇದ್ದಿರಲಿಲ್ಲ. ನನಗೆ ಪೋಲಿಸರು ಈ ಪ್ರಕರಣದಲ್ಲಿ ಮಹರಿಗೆ ಸಾಕ್ಷಿಯಾಗುವಂತೆ ಕೋರಿ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಾನು 1ನೇ ಆರೋಪಿಯಿಂದ ಯಾವುದೇ ಚಿನ್ನವನ್ನು ಖರೀದಿಸಿಲ್ಲ ಹಾಗೂ ಅದನ್ನು ಕರಗಿಸಿ ಗಟ್ಟಿ ಮಾಡಿ ನಂತರ ಪೋಲಿಸರಿಗೆ ನೀಡಿರುವುದಿಲ್ಲ ಹಾಗೂ ನಿಪಿ 8ರ ಅಡಿಯಲ್ಲಿ ಯಾವುದೇ ಮಹಜರ ಕ್ರಮ ಜರುಗಿಸಿ ಪೋಲಿಸರು ಅದನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ

ಮಾಡುವ ಉದ್ದೇಶದಿಂದ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

***ಸಿ.ಸಿ. ಸಂಖ್ಯೆ : 128/2016***

***ಚಾಸಾ : 7***
***ಪ್ರಾಸಾ : 5***

| | |
|---|---|
| **ಹೆಸರು** | : ಮಂಜೇಗೌಡ ವಿ ಎಸ್ |
| **ತಂದೆಯ ಹೆಸರು** | : ಸತ್ಯಪ್ಪ |
| **ವಯಸ್ಸು** | : 47 ವರ್ಷ |
| **ಉದ್ಯೋಗ** | : ಕೋ ಆಪರೇಟಿವ್ ಸೊಸೈಟಿಯಲ್ಲಿ ಸಿಇಓ ಆಗಿರುತ್ತೇನೆ |
| **ವಾಸಸ್ಥಳ** | : ಚೆನ್ನರಾಯ ಪಟ್ಟಣ ತಾ|| ಹಾಸನ ಜಿಲ್ಲೆ |

**ದಿನಾಂಕ : *24-05-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ :-**

ಚಾಸಾ-8 ಹಾಗೂ 9 ರವರ ಪರಿಚಯವಿರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ಚಿನ್ನದ ಗಟ್ಟಿಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ*8* ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ*8(ಬಿ)* ಎಂದು ಗುರುತಿಸಲಾಯಿತು. ಸದರಿ ಮಹಜರಿನಲ್ಲಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ನಿಪಿ8 ನ್ನು ಓದಿ ಹೇಳಲಾಯಿತು. ದಿನಾಂಕ 28-02-2015 ರಂದು ಮಡಿಕೇರಿ ನಗರದಲ್ಲಿರುವ ಜಿಲ್ಲಾ ಅಪರಾಧ ಪತ್ತೆ ದಳ ಕಛೇರಿಯಲ್ಲಿ ಚಾಸಾ9 ರವರು ಈ ಪ್ರಕರಣದಲ್ಲಿ ಕಳುವಾದ ಚಿನ್ನವನ್ನು ಕರಗಿಸಿ ಅದರ ಗಟ್ಟಿಯನ್ನು ಹಾಜರುಪಡಿಸಿದ್ದು, ಪೋಲಿಸರು ನನ್ನ,

ಚಾಸಾ8 ಹಾಗೂ ಚಾಸಾ-9 ರವರ ಸಮಕ್ಷಮ ನಿಪಿ 8 ರಂತೆ ಮಹಜರ ಕ್ರಮ ಜರುಗಿಸಿ ಸದರಿ ಚಿನ್ನದ ಗಟ್ಟಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ದಿನಾಂಕದಂದು ನಿಪಿ 8 ನ್ನು ಬರೆಯುವಾಗ ನಾನು ಸ್ಥಳದಲ್ಲಿದ್ದು, ನಿಪಿ8 ರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು, ಅದಕ್ಕೆ ಸಹಿ ಮಾಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು : ಶ್ರೀ. ಸಿ ಕೆ ಪಿ *2* ರಿಂದ *4*ನೇ ಆರೋಪಿಗಳ ಪರ ವಕೀಲರಿಂದ :**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-<br>(ಸಂತೋಷ ಕೊಠಾರಿ)<br>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.<br>ವಿರಾಜಪೇಟೆ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>**

***<u>ಸಿ.ಸಿ. ಸಂಖ್ಯೆ : 128/2016</u>***

***ಚಾಸಾ : 8***
***ಪ್ರಾಸಾ : 6***

| | | |
|---|---|---|
| **ಹೆಸರು** | : | ಗಂಗಾಧರ್ ಸಿ ಬಿ |
| **ತಂದೆಯ ಹೆಸರು** | : | ಭೋಜಪ್ಪ ಸಿ ಕೆ |
| **ವಯಸ್ಸು** | : | 48 ವರ್ಷ |
| **ಉದ್ಯೋಗ** | : | ಕಾಂಟ್ರಾಕ್ಟರ್ |
| **ವಾಸಸ್ಥಳ** | : | ಚೆನ್ನರಾಯ ಪಟ್ಟಣ ತಾ|| ಹಾಸನ ಜಿಲ್ಲೆ |

**<u>ದಿನಾಂಕ : *24-05-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ :-**

ಚಾಸಾ-7 ಹಾಗೂ 9 ರವರ ಪರಿಚಯವಿರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ಚಿನ್ನದ ಗಟ್ಟಿಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ*8* ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ*8(ಸಿ)* ಎಂದು ಗುರುತಿಸಲಾಯಿತು. ಸದರಿ ಮಹಜರಿನಲ್ಲಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>

ಸಾಕ್ಷಿಗೆ ನಿಪಿ8 ನ್ನು ಓದಿ ಹೇಳಲಾಯಿತು. ದಿನಾಂಕ 28-02-2015 ರಂದು ಮಡಿಕೇರಿ ನಗರದಲ್ಲಿರುವ ಜಿಲ್ಲಾ ಅಪರಾಧ ಪತ್ತೆ ದಳ ಕಛೇರಿಯಲ್ಲಿ ಚಾಸಾ9 ರವರು ಈ ಪ್ರಕರಣದಲ್ಲಿ ಕಳುವಾದ ಚಿನ್ನವನ್ನು ಕರಗಿಸಿ ಅದರ ಗಟ್ಟಿಯನ್ನು ಹಾಜರುಪಡಿಸಿದ್ದು, ಪೋಲಿಸರು ನನ್ನ,

ಚಾಸಾ7 ಹಾಗೂ ಚಾಸಾ-9 ರವರ ಸಮಕ್ಷಮ ನಿಪಿ 8 ರಂತೆ ಮಹಜರ ಕ್ರಮ ಜರುಗಿಸಿ ಸದರಿ ಚಿನ್ನದ ಗಟ್ಟಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ದಿನಾಂಕದಂದು ನಿಪಿ 8 ನ್ನು ಬರೆಯುವಾಗ ನಾನು ಸ್ಥಳದಲ್ಲಿದ್ದು, ನಿಪಿ8 ರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು, ಅದಕ್ಕೆ ಸಹಿ ಮಾಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಃ ಶ್ರೀ. ಸಿ ಕೆ ಪಿ *2* ರಿಂದ *4*ನೇ ಆರೋಪಿಗಳ ಪರ ವಕೀಲರಿಂದ ಃ**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.